ಒ. ಎಸ್. ನಂ.419/2017

ಪಿಡಬ್ಲೂ-1

ದಿನಾಂಕಃ 25.11.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲು :- ಶ್ರೀ. ಪ್ರತಿವಾದಿ ಪರ ವಕೀಲರಿಂದಃ-**

ಏನು ಪರಿಹಾರ ಕೋರಿ ದಾವೆ ಸಲ್ಲಿಸಿದ್ದೀರಾ ಎಂದರೆ ಭಾಗಾಂಶ ಕೋರಿ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಮೂಲ ಮಾಲೀಕರು ಕುಪ್ಪಾಯಿಯಮ್ಮ ಎಂದು ನುಡಿಯುತ್ತಾರೆ. ಸದರಿ ಯವರು ಯಾವಾಗ ಮೃತ ಪಟ್ಟಿರುತ್ತಾರೆ ಎಂದು ಗೊತ್ತಿಲ್ಲ. ಸದರಿಯವರ ಗಂಡನ ಹೆಸರು ಅಳಗಿರಿ ಸ್ವಾಮಿ. ಅವರು ಯಾವಾಗ ಮೃತ್ತ ಪಟ್ಟಿಸಿರುತ್ತಾರೆ ಎಂದು ದಿನಾಂಕ ಗೊತ್ತಿಲ್ಲ. ಕುಪ್ಪಾಯಿಯಮ್ಮ ತಂದೆ ತಾಯಿ ಹೆಸರು ಗೊತ್ತಿಲ್ಲ. ಅಳಗಿರಿ ನಾಯರ್ ರವರ ತಂದೆ ತಾಯಿ ಹೆಸರು ಗೊತ್ತಿಲ್ಲ. ದಾವಾ ಸ್ವತ್ತಿನ ಚಕ್ಕುಬಂಧಿ ಪೂರ್ವಕ್ಕೆ ಕುಪ್ಪಸ್ವಾಮಿ ಯವರ ಜಮೀನು ಪಶ್ಚಿಮಕ್ಕೆ ಊರು, ಉತ್ತರಕ್ಕೆ ರಾಮಸ್ವಾಮಿಯವರ ಮನೆ ಮತ್ತು ದಕ್ಷಿಣಕ್ಕೆ ರಸ್ತೆ. ನನ್ನ ತಂದೆ ವೇಲು ಸ್ವಾಮಿಯವರ ಮದುವೆ ಯಾವಾಗ ಆಗಿರುತ್ತದೆ ಎಂದು ಗೊತ್ತಿಲ್ಲ. ಮುಂದುವರಿದು ಬೆಂಗಳೂರಿನಲ್ಲಿ ಆಗಿರುತ್ತದೆ. ನನ್ನ ತಂದೆ ಬೆಂಗಳೂರಿನಲ್ಲಿ ಕೂಲಿ ಕೆಲಸ ಮಾಡುತ್ತಿದ್ದರು. ಬೆಂಗಳೂರಿಗೆ ಯಾವ ದಿನಾಂಕದಂದು ಹೋಗಿರುತ್ತಾರೆ ಎಂದರೆ ದಿನಾಂಕ ಗೊತ್ತಿಲ್ಲ ನಾನು 8 ವರ್ಷ ದವಳಿದ್ದಾಗ ಎಂದು ನುಡಿಯುತ್ತಾರೆ. ನನಗೆ ಈಗ 53 ವರ್ಷ. ನನ್ನ ತಂದೆ ಬೆಂಗಳೂರಿಗೆ ಹೋದ ನಂತರ ವಾಪಸ್ ಊರಿಗೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ. 2017 ರಲ್ಲಿ ಪ್ರತಿವಾದಿಗೆ ಖಾತೆಯಾಗಿರುವ ವಿಚಾರ ಗೊತ್ತಾಗಿರುತ್ತದೆ. ಪಂಚಾಯಿತಿಗೆ ಯಾರು ಯಾರು ಬಂದಿದ್ದರು ಎಂದು ಅವರ ಹೆಸರು ಹೇಳಲಾಗುವುದಿಲ್ಲ. ಅವರನ್ನು ಸಾಕ್ಷಿದಾರರನ್ನಾಗಿ ಮಾಡಲು ತೊಂದರೆ ಇಲ್ಲ. ಆ ರೀತಿ ಯಾವುದೇ ಪಂಚಾಯಿತಿ ಮಾಡಿಲ್ಲ ಎಂದರೆ ಸರಿಯಲ್ಲ.

ನನ್ನ ತಂದೆ ಬೊಚಿ ಕಟ್ಟೆ ಗ್ರಾಮದಲ್ಲಿ ವಾಸವಿದ್ದರು ಎಂದು ತೋರಿಸಲು ದಾಖಲೆ ಹಾಜರುಪಡಿಲ್ಲ. ನನ್ನ ತಂದೆ ಯಾವತ್ತು ಸದರಿ ಗ್ರಾಮದಲ್ಲಿ ವಾಸವಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಮೂಲ ಮುಂಜೂರುದಾರರಾದ ಕುಪ್ಪಾಯಿಯಮ್ಮ ರವರ ಮಗ ಅಲ್ಲ ಎಂದರೆ ಸರಿಯಲ್ಲ. ಕುಪ್ಪಾಯಿಯಮ್ಮ ರವರ ಗಂಡನವರನ್ನು ಅಳಗಿರಿ ನಾಯರ್ ಎಂದು ಮಾತ್ರ ಕರೆಯುತ್ತಿದ್ದರು ಎಂದರೆ ಅಳಗಿರಿ ಸ್ವಾಮಿ ಎಂತಲೂ ಕರೆಯುತ್ತಿದ್ದರು ಎಂದು ನುಡಿಯುತ್ತಾರೆ. ಅಳಗಿರಿ ಸ್ವಾಮಿ ಎಂದು ಯಾವುದೇ ದಾಖಲೆಗಳಲ್ಲಿ ನಮೂದು ಇಲ್ಲ ಎಂದರೆ ಸರಿಯಲ್ಲ. ದಿನಾಂಕ 11.08.2009 ರಲ್ಲಿ ನನ್ನ ತಂದೆ ಬೆಂಗಳೂರಿನಲ್ಲಿ ಮೃತಪಟ್ಟಿರುತ್ತಾರೆ.ಅವರ ಅಂತ್ಯ ಕ್ರಿಯೆಯನ್ನು ಬೆಂಗಳೂರಿನಲ್ಲಿ ಮಾಡಿರುತ್ತೇನೆ. ಕುಪ್ಪಾಯಿಯಮ್ಮ ರವರ ಅಂತಿಮ ಕಾರ್ಯ ಬೂಚಿನ ಕಟ್ಟೆಯಲ್ಲಿ ಮಾಡಿರುತ್ತಾರೆ.

ಅಳಗಿರಿ ನಾಯರ್ ರವರ ಅಂತಿಮ ಕಾರ್ಯವನ್ನು ತಮಿಳುನಾಡಿನ ಈರೋಡ್ ನಲ್ಲಿ ಮಾಡಿರುತ್ತಾರೆ. ಕುಪ್ಪಾಯಿಯಮ್ಮ ರವರನ್ನು ಕುಪ್ಪಾಯಿಯಮ್ಮ ಎಂದು ಮಾತ್ರ ಕರೆಯುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಬೋಚಿ ಕಟ್ಟೆ ಗ್ರಾಮದಲ್ಲಿ ಇದ್ದರು ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಲು ತೊಂದರೆ ಇದಿಯಾ ಎಂದರೆ ದಾಖಲೆ ಇರುವ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಕುಪ್ಪಾಯಿಯಮ್ಮ ಮತ್ತು ಅಳಗಿರಿ ನಾಯರ್ ರವರಿಗೆ ಒಬ್ಬನೇ ಮಗ ಮುತ್ತು ಸ್ವಾಮಿ ಎಂದರೆ ಸರಿಯಲ್ಲ. ನಾನಾಗಲೀ ಅಥವಾ ಇತರೆ ವಾದಿಗಳಾಗಲೀ ಕುಪ್ಪಾಯಿಯಮ್ಮ ಮತ್ತು ಅಳಗಿರಿ ನಾಯರ್ ರವರ ವಾರಸುದಾರರಲ್ಲ ಎಂದರೆ ಸರಿಯಲ್ಲ. ಸದರಿಯವರ ಹೆಸರಿನ ಸಾಮೀಪ್ಯತೆಯನ್ನು ದುರುಪಯೋಗಪಡಿಸಿಕೊಂಡು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಮೂಲತಃ ಬೋಚಿ ಕಟ್ಟೆ ಗ್ರಾಮದವರಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು, ನೀಡಲಾಯಿತು.**

(ತೆರೆದ ನ್ಯಾದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

**2 ನೇ ಹೆಚ್ಚುವರಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹೆಚ್.ಡಿ. ಕೋಟೆ**